**CC 54/2017**
**PW.5**

**ಅಪರ ಸಿವಿಲ್ ನ್ಯಾಯಾಧೀಶರು ಮತ್ತು ಜೆ ಎಂ ಎಫ್ ಸಿ ನ್ಯಾಯಾಲಯ,**
**ದೊಡ್ಡಬಳ್ಳಾಪುರ**
**ಸಿ ಸಿ ನಂ : 54/2017**

**ಪಿ ಡಬ್ಲ್ಯೂ - 5**
**ಸಿ ಡಬ್ಲ್ಯೂ - 5**

**ದಿಃ 23.02.2026 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಹೆಸರು ಃ ಬಸವರಾಜು**
**ತಂದೆಯ ಹೆಸರು ಃ ಚಿಕ್ಕಸಿದ್ದಯ್ಯ**
**ವಯಸ್ಸು ಃ 56 ವರ್ಷ**
**ಉದ್ಯೋಗ ಃ ವ್ಯವಸಾಯ**
**ವಿಳಾಸ ಃ ಚಿಕ್ಕಹೆಜ್ಜಾಜಿ**
**ಮುಖ್ಯ ವಿಚಾರಣೆ ಃ ಸ ಸ ಅ ರವರಿಂದ**

ಆರೋಪಿತರು ಗೊತ್ತು. ಚಾಸಾ-2, 3 ಮತ್ತು 6 ರವರು ಗೊತ್ತು. ಸುಮಾರು 3-4 ವರ್ಷಗಳ ಹಿಂದೆ ಸರ್ಕಾರದವರು ಸರ್ಕಾರಿ ಶಾಲೆಯ ಆಟದ ಮೈದಾನಕ್ಕಾಗಿ ಸುಮಾರು 4 ಎಕರೆ 28 ಗುಂಟೆ ಜಮೀನನ್ನು ಮಂಜೂರು ಮಾಡಿದ್ದರು. ಸದರಿ ಜಮೀನಿನಲ್ಲಿ ಆರೋಪಿತರು ನಮಗೆ ಜಮೀನು ಮಂಜೂರಾಗಿದೆ ಎಂದು ಸುಮಾರು 4 ಗುಂಟೆ ಜಮೀನಿನ್ನು ಅತೀಕ್ರಮ ಪ್ರವೇಶ ಮಾಡಿ ಉಳುಮೆ ಮಾಡುತ್ತಿದ್ದರು. ಆರೋಪಿತರು ಜಮೀನನ್ನು ಒತ್ತುವರಿ ಮಾಡಿ ಉಳುಮೆ ಮಾಡುತ್ತಿದ್ದು, ಈ ಕುರಿತು ದೂರು ದಾಖಲಾಗಿದ್ದು, ನಾನು ಪೋಲೀಸರಿಗೆ ಹೇಳಿಕೆಯನ್ನು ಕೊಟ್ಟಿರುತ್ತೇನೆ. ಸಾಕ್ಷಿಯು ನ್ಯಾಯಾಲಯದ ಮುಂದಿರುವ ಆರೋಪಿತರನ್ನು ನೋಡಿ ಗುರುತಿಸಿರುತ್ತಾರೆ.

**ಪಾಟೀ ಸವಾಲುಃ ಆರೋಪಿತರ ಪರ ಶ್ರೀ. ಎ.ಎನ್.ಎಸ್., ವಕೀಲರಿಂದ**

ಚಿಕ್ಕಹೆಜ್ಜಾಜಿ ನನ್ನ ಹುಟ್ಟೂರು. ಆರೋಪಿತರು ಚಿಕ್ಕಹೆಜ್ಜಾಜಿಯಲ್ಲಿಯೇ ವಾಸಿಸುತ್ತಿದ್ದಾರೆ ಎಂದರೆ ಸರಿ. ಸರ್ವೇ ನಂ. 14 ಸರ್ಕಾರಿ ಗೋಮಾಳ ಜಾಗ ಸುಮಾರು 30 ಎಕರೆ ಜಾಗ ಎಂದರೆ ಸರಿ. ಸದರಿ ಜಾಗದಲ್ಲಿ ನಮ್ಮೂರಿನ 7-8 ಜನ ಉಳುಮೆ ಮಾಡುತ್ತಿದ್ದಾರೆ ಎಂದರೆ ಸರಿ. ಅದೇ ರೀತಿ ಆರೋಪಿತರು ಸುಮಾರು 30-40 ವರ್ಷಗಳಿಂದ ಉಳುಮೆ ಮಾಡುತ್ತಿದ್ದಾರೆ ಎಂದರೆ ಸರಿ. ಪೋಲೀಸರಿಗೆ ನಾನು ಕೊಟ್ಟಿರುವ ಹೇಳಿಕೆಯಲ್ಲಿನ ವಿಚಾರಗಳು ನೆನಪಿಲ್ಲ. 1 ನೇ ಆರೋಪಿಗೆ ಸರ್ಕಾರ ಸುಮಾರು 30 ವರ್ಷಗಳ ಹಿಂದೆಯೇ 18 ಗುಂಟೆ ಜಮೀನನ್ನು ಸರ್ವೇ ನಂ.14 ರಲ್ಲಿ ಮಂಜೂರು ಮಾಡಿದೆ ಎಂದರೆ ಸರಿ. 2 ನೇ ಆರೋಪಿಯು ತಾನು ಉಳುಮೆ ಮಾಡುತ್ತಿದ್ದ ಜಮೀನಿಗಾಗಿ ಅಕ್ರಮ

ಸಕ್ರಮದಡಿ ಅರ್ಜಿ ಸಲ್ಲಿಸಿರುತ್ತಾರೆ ಎಂದರೆ ಸರಿ. ಸರ್ಕಾರಿ ಮೈದಾನಕ್ಕೆ ಜಮೀನು ಯಾವಾಗ ಮಂಜೂರಾಗಿದೆ ಎಂದು ನನಗೆ ಗೊತ್ತಿಲ್ಲ. ಸರ್ವೇ ನಂ.14 ರಲ್ಲಿ 4 ಎಕರೆ 28 ಜಮೀನು ಪೋಡಿಯಾಗಿಲ್ಲ. ಆರೋಪಿತರು ಯಾವ ಭಾಗದ ಜಮೀನಿನಲ್ಲಿ ಒತ್ತುವರಿ ಮಾಡಿರುತ್ತಾರೆ ಎಂದು ಗೊತ್ತಿಲ್ಲದೇ ಇದ್ದರೂ ಹಾಗೂ ಆರೋಪಿತರು ತಮ್ಮ ಜಮೀನನಲ್ಲಿ ಉಳುಮೆ ಮಾಡುತ್ತಿದ್ದರೂ ಆರೋಪಿತರ ವಿರುದ್ಧ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**<u>ಮರು ವಿಚಾರಣೆಃ</u> ಇಲ್ಲ**

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನ ರೀತ್ಯ ಬೆರಳಚ್ಚುಗಾರರಿಂದ ಗಣಕಯಂತ್ರದಲ್ಲಿ ಬೆರಳಚ್ಚು ಮಾಡಿಸಲಾಯಿತು)**

**ಓ ಹೇ ಕೇ ಸ ಅದೆ**

**ಅಪರ ಸಿವಿಲ್ ನ್ಯಾ. ಮತ್ತು**
**ಜೆ.ಎಂ.ಎಫ್.ಸಿ, ದೊಡ್ಡಬಳ್ಳಾಪುರ**